ಅ.ದಾವಾ ನಂ. 31/2021

ದಿನಾಂಕಃ **06-06-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ,</u>**

1) ನಾರಾಯಣ ಮತ್ತು ಜಾನ್ ಎಂಬುವರರು 2014 ಸಾಲಿ ನಲ್ಲಿ ದಾವಾ ಸ್ವತ್ತು ಮಾರಾಟಕ್ಕೆ ಇಡಲಾಗಿದೆ ಎಂದು ನನಗೆ ತಿಳಿಸಿರುತ್ತಾರೆ. ಸದರಿ ನಾರಾಯಣ ಮತ್ತು ಜಾನ್ ಎಂಬುವರರು ದೊಡ್ಡ ಕೊಪ್ಪಲು ಗ್ರಾಮದ ನಿವಾಸಿಗಳು ಆಗಿರುತ್ತಾರೆ. ನಾನು ಉದ್ದೇಶ ಪೂರ್ವಕವಾಗಿ ಸದರಿಯವರ ಹೆಸರು ಸಾಕ್ಷಿ ಪಟ್ಟಿಯಲ್ಲಿ ನಮೂದು ಮಾಡಿಲ್ಲ ಎಂದರೆಸರಿಯಲ್ಲ. ದಿನಾಂಕಃ 01-12-2014 ರಂದು ಮಂಚಯ್ಯ ರವರು ಬರೆದುಕೊಡಲಾಗಿದೆ ಎನ್ನುವ ದಾಖಲೆಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಎಂದರೆ ಸರಿಯಲ್ಲ.

2)ನಾನು ಮಂಚಯ್ಯರವರ ವಾಸದ ಮನೆಯನ್ನು ನೋಡಿರುತ್ತೇನೆ. ನಾನು ಮಂಚಯ್ಯ ರವರ ಮನೆಗೆ ಹೋಗಿರುವುದಿಲ್ಲ ಎಂದರೆ ಎಂದರೆ ಸರಿಯಲ್ಲ. ಮಂಚಯ್ಯ ರವರಿಗೆ ಅವರಿಗೆ ಆಸ್ತಿಯನ್ನು ಮಾರಾಟ ಮಾಡುವ ಉದ್ದೇಶ ಇರಲಿಲ್ಲ ಮತ್ತು ಸದರಿಯವರು ನನಗೆ ಯಾವುದೇ ಕರಾರು ಪತ್ರವನ್ನು ಬರೆದುಕೊಟ್ಟಿರುವುದಿಲ್ಲ ಎಂದರೆ ಎಂದರೆ ಸರಿಯಲ್ಲ. ಡೊರನಹಳ್ಳಿ ಗ್ರಾಮದ ಸರ್ವೆ ನಂ.1 ಆಸ್ತಿಗೆ ಸಂಬಂದಪಟ್ಟ ಎಲ್ಲ ದಾಖಲೆಗಳನ್ನು ನೋಡಿರುತ್ತೇನೆ. ನಾನು ಸದರಿ ಆಸ್ತಿಯ ದಾಖಲಾತಿಗಳನ್ನು ಮಂಚಯ್ಯ ರವರಿಂದ ಪಡೆದುಕೊಂಡಿರುತ್ತೇನೆ. ಕರಾರು ಪತ್ರ ಆಗಿದೆ ಎಂದು ಹೇಳುವ ದಿನ ಮಂಚಯ್ಯ ರವರು ನನಗೆ ಯಾವುದೇ ಕರಾರು ಬರೆದುಕೊಡದ ಕಾರಣ ನನಗೆ ಯಾವುದೇ ದಾಖಲಾತಿಗಳನ್ನು ನೀಡಿರುವುದಿಲ್ಲ ಎಂದರೆ ಎಂದರೆ ಸರಿಯಲ್ಲ.

3) ನಿಪಿ-01 ರಿಂದ 05 ದಾಖಲಾತಿಗಳನ್ನು ಈ ದಾವೆಯನ್ನು ಸಲ್ಲಿಸುವ ಸಲುವಾಗಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-06 ಕರಾರು ಪತ್ರದ ಛಾಪಾ

ಕಾಗದವನ್ನು ನನ್ನ ಪರವಾಗಿ ಕೃಷ್ಣರಾಜ ಅರಸ್ ವಕೀಲರು ಖರೀದಿ ಮಾಡಿರುತ್ತಾರೆ. ದಿಃ20-08-2020 ರಂದು ನಿಪಿ-06 ಛಾಪಾ ಕಾಗದವನ್ನು ಖರೀದಿ ಮಾಡಲು ನಾನು ಹೇಳಿರುತ್ತೇನೆ. ಖರೀದಿ ಮಾಡಿದ ಎರಡು ಮೂರು ದಿನಗಳ ನಂತರ ಛಾಪಾ ಕಾಗದವನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ತಿಳಿಸಿರುತ್ತಾರೆ. ದಿಃ 28-08-2020 ಅಥವಾ ದಿಃ 29-08-2020 ರಂದು ಪ್ರತಿವಾದಿಗಳು ಕರಾರು ಪತ್ರ ಬರೆದಕೊಟ್ಟು ಸಹಿ ಮಾಡಿರುತ್ತಾರೆ. ನಿಪಿ-06 ಕರಾರು ಪತ್ರವನ್ನು ಕೆ.ಆರ್.ನಗರದ ವಕೀಲರ ಕಚೇರಿಯಲ್ಲಿ ಪ್ರತಿವಾದಿಗಳು ಬರೆದು ಕೊಟ್ಟಿರುತ್ತಾರೆ. ನಾನು ಆ ದಿನ ವಕೀಲರ ಕಚೇರಿಗೆ ಎಷ್ಟು ಸಮಯಕ್ಕೆ ಹೋಗಿರುತ್ತೇನೆ ಎಂದು ನನಗೆ ನೆನಪಿರುವುದಿಲ್ಲ. ಆ ಸಮಯದಲ್ಲಿ ಪ್ರತಿವಾದಿಗಳು ಮಂಚಯ್ಯ ರವರ ಮನೆಯಲ್ಲಿ ಬೇಟಿಯಾಗಿರುತ್ತಾರೆ.

4) ಕರಾರು ಪತ್ರವನ್ನು ನನ್ನ ಹೇಳಿಕೆಯ ಮೇರೆಗೆ ವಕೀಲರು ತಯಾರು ಮಾಡಿರುತ್ತಾರೆ. ಪ್ರತಿವಾದಿಗಳು ಆ ದಿನ ವಕೀಲರ ಕಚೇರಿಗೆ ಸ್ವ-ಇಚ್ಚೆಯಿಂದ ಬಂದಿರುತ್ತಾರೆ. ಸದರಿ ದಿನ ಪ್ರತಿವಾದಿಗಳು ವಕೀಲರ ಕಚೇರಿಗೆ ಬಂದಿರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ವಿದ್ಯಾಭ್ಯಾಸ ಇರುವುದಿಲ್ಲ ಎಂದರೆ ಸರಿ. ಆದರೆ ಅವರಿಗೆ ವ್ಯವಹಾರಿಕ ಜ್ಞಾನ ಇತ್ತು ಎಂದು ನುಡಿಯುತ್ತಾರೆ. ನಿಪಿ-06 ಕರಾರು ಪತ್ರ ಆಂಗ್ಲ ಭಾಷೆಯಲ್ಲಿ ಬೆರಳಚ್ಚುಮಾಡಲಾಗಿದೆ ಎಂದರೆ ಸರಿ. ನಿಪಿ-06 3 ಕರಾರು ಪತ್ರದಲ್ಲಿ ದಾವಾ ಅನುಸೂಚಿ ಸ್ವತ್ತಿನ ವಿಸ್ತೀರ್ಣ ನಮೂದು ಮಾಡಿರುವುದಿಲ್ಲ. ಒಂದು ವೇಳೆ ಪ್ರತಿವಾದಿಗಳು ಕರಾರು ಪತ್ರ ಬರೆದುಕೊಟ್ಟಿದ್ದೆ ಆದಲ್ಲಿ ಕರಾರು ಪತ್ರದ ಅನುಸೂಚಿಯಲ್ಲಿ ವಿಸ್ತೀರ್ಣವನ್ನು ನಮೂದು ಮಾಡಿದ್ದರು ಎಂದರೆ ಸಾಕ್ಷಿಯು ನಮೂದು ಮಾಡಿದ್ದರು ಎನ್ನುತ್ತಾರೆ.

5) ಕರಾರು ಪತ್ರವನ್ನು ನೊಂದಣಿ ಮಾಡಿಸಲು ಏನಾದರು ತೊಂದರೆ ಇತ್ತಾ ಎಂದರೆ ಸಾಕ್ಷಿಯು ನೊಂದಣಿ ಮಾಡಿಸುವ ಅವಶ್ಯಕತೆ ಇಲ್ಲ ಎಂದು ನುಡಿಯುತ್ತಾರೆ. ಕರಾರು ಪತ್ರವನ್ನು ತಯಾರು ಮಾಡಿದ ವಕೀಲರನ್ನು ಸಾಕ್ಷಿ ವಿಚಾರಣೆ ಮಾಡಿಸಲು ತೊಂದರೆ

ಇರುವುದಿಲ್ಲ. ಅದೇ ರೀತಿ ಸಾಕ್ಷಿದಾರರನ್ನು ಸಹ ವಿಚಾರಣೆ ಮಾಡಿಸಲು ತೊಂದರೆ ಇರುವುದಿಲ್ಲ. ಮಂಚಯ್ಯ ರವರು ಜೀವಂತ ಅವಧಿಯಲ್ಲಿ ಅವರು ಆಸ್ಪತ್ರೆಯಲ್ಲಿ ನಾನು 2018 ನೇ ಸಾಲಿನಲ್ಲಿ 1,00,000/- ಹಣವನ್ನು ನೀಡಿರುತ್ತೇನೆ. ನಾನು ಮಂಚಯ್ಯ ರವರಿಗೆ ನಾನು ಹೇಳಿದಂತೆ 1,00,000/- ಮಂಚಯ್ಯ ರವರಿಗೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ವಿಚಾರಣೆಗೆ ವಕೀಲರ ಕೋರಿಕೆಯ ಮೇರೆಗೆ ಕಾಲಾವಕಾಶ ನೀಡಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರಧನ್ಯಾದಂ., ಕೆ.ಆರ್.ನಗರ.